# ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ಬಲದಂಡೆ ನಾಲಾ ವಿಭಾಗ.
ಹೊಳೆನರಸೀಪುರ
ಹಾಸನ ಜಿಲ್ಲೆ- 573211

ದೂ. : 08175-273238
ಫ್ಯಾಕ್ಸ್ : 08175-273403
e-mail: eehrbchnp@gmail.com


ಸಂಖ್ಯೆ:ಹೇಬನಾವಿ/ಸ.ಇಂ/ದುದ್ದ-ಶಾಂತಿಗ್ರಾಮ.ಎ.ನೀ.ಯೋ/ಪೈಪ್ ಲೈನ್/ಅರಣ್ಯ/2022-23: 310 ದಿನಾಂಕ: 30-06-2022

**ಇವರಿಗೆ**
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಹಾಸನ ವಿಭಾಗ,
ಹಾಸನ.

ಮಾನ್ಯರೆ,

**ವಿಷಯ:** Scheme to lift water from Hemavathy river near Mavinakere village of Holenarasipura taluk to fill 160 tanks and 10 kattes of Dudda and Shanthigrama hobli of Hassan taluk for drinking purpose ಕಾಮಗಾರಿಯ ಪೈಪ್ ಲೈನ್ ಅಳವಡಿಸುವ ಬಗ್ಗೆ

**ಉಲ್ಲೇಖ:**
1. ಕಾರ್ಯಪಾಲಕ ಇಂಜಿನಿಯರ್, ಹೇ.ಬ.ನಾ. ವಿಭಾಗ ಹೊಳೆನರಸೀಪುರ ರವರ ಕಛೇರಿ ಗುತ್ತಿಗೆ ಕರಾರು ಸಂಖ್ಯೆ: 131/ 2018-19 ದಿನಾಂಕ: 25.02.2019
2. ಸೂಪರಿಂಟೆಂಡಿಂಗ್ ಇಂಜಿನಿಯರ್, ಹೇಮಾವತಿ ಯೋಜನ ವೃತ್ತ, ಗೊರೂರು ರವರ ಪತ್ರ ಸಂಖ್ಯೆ:160 ದಿನಾಂಕ: 18.05.2020
3. ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಪತ್ರ ಬಿ4/ಲ್ಯಾಂಡ್/ಎಫ್.ಸಿ./ಸಿ.ಆರ್-11 ದಿ:25.11.2021

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಉಪವಿಭಾಗದ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುತ್ತಿರುವ ಹೊಳೆನರಸೀಪುರ ತಾಲ್ಲೂಕು ಮಾವಿನಕೆರೆ ಗ್ರಾಮದ ಹತ್ತಿರ ಹೇಮಾವತಿ ನದಿಯಿಂದ ನೀರನ್ನು ಎತ್ತಿ ಹಾಸನ ತಾಲ್ಲೂಕಿನ ದುದ್ದ ಹಾಗೂ ಶಾಂತಿಗ್ರಾಮ ಹೋಬಳಿಗಳ 160 ಕೆರೆಗಳು ಹಾಗೂ 10 ಕಟ್ಟೆಗಳಿಗೆ ಕುಡಿಯುವ ನೀರಿಗಾಗಿ ನೀರನ್ನು ಹರಿಸುವ ಯೋಜನೆಯನ್ನು ಉಲ್ಲೇಖ (1) ರ ಮೆ// ಅಡುಇನ್‌ಫ್ರಾ (ಶ್ರೀ ಅರುಣ್‌ಕುಮಾರ್ ಡಿ.ಬಂಡಿ) Joint Venture Ocean construction (India) Pvt., Ltd., No.22, KHB Coloney, Sholapur road,vijayapura ರವರಿಗೆ ವಹಿಸಿದ್ದು, ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಪ್ರಾರಂಭಿಸಿರುತ್ತಾರೆ.

ಮುಂದುವರೆದು ಉಲ್ಲೇಖ ಪತ್ರ (2) ರಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್, ಹೇಮಾವತಿ ಯೋಜನ ವೃತ್ತ, ಗೊರೂರು ರವರು ಅನುಮೋದಿಸಿರುವ ಪೈಪ್‌ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ Online proposal No. FP/KA/IRRIG/49031/2020 ನಲ್ಲಿ ಅನುಮೋದನೆ ಕೋರಿ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆಯನ್ನು ನೋಡಲ್ ಅಧಿಕಾರಿಗಳು ಹಾಗೂ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ದಿನಾಂಕ:17.07.2021 ರಂದು ಅನುಮೋದನೆ ನೀಡಿದ್ದು, ಈ ಸಂಬಂಧ ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಉಲ್ಲೇಖ (3) ರ ಪತ್ರದಲ್ಲಿ ತಿಳಿಸಿರುವುದು ಸರಿಯಷ್ಟೆ. ಸದರಿ ಪ್ರಸ್ತಾವನೆಯನ್ನು ತಯಾರಿಸಿ 06 ಪ್ರತಿಗಳಲ್ಲಿ ಹಾಗೂ ನಕ್ಷೆಗಳನ್ನು ಕೆಎಂಎಲ್ (KML) ನಲ್ಲಿ ಸಾಫ್ಟ್ ಹಾಗೂ ಹಾರ್ಡ್ ಕಾಪಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ಅಡಕ: ಪ್ರಸ್ತಾವನೆ-06 ಪ್ರತಿಗಳು

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ಬಲದಂಡೆ ನಾಲಾ ವಿಭಾಗ,
ಹೊಳೆನರಸೀಪುರ.